

# ಭಕ್ತ ನಿಳೋಬ

ಕಥೆ : ಕೆ ಅಳಗರಾಜ

ಚಿತ್ರ: ಗೋವಿ






5
ಅಲ್ಲೊಬ್ಬ ದಾರಿಹೋಕ ...
ಸ್ವಾಮಿ, ಯಾರು ನೀವು? ನಿಮಗೆ ಏನಾಗಬೇಕು?
ನನಗೆ ಒಂದಿಷ್ಟು ಹಸಿವಾಗಿದೆ, ನನ್ನ ಬಳಿ ಕೆಲವು ವಸ್ತುಗಳಿವೆ. ಅವುಗಳನ್ನು ನೀವು ಸ್ವೀಕರಿಸಿ, ನನಗೆ ಒಂದಿಷ್ಟು ಆಹಾರ ಕೊಡಿ.
ಸ್ವಾಮಿ, ದಯವಿಟ್ಟು ಬನ್ನಿ.. ಊಟಮಾಡಿ. ಆಹಾರಕ್ಕಾಗಿ ನೀವು ಏನನ್ನಾದರೂ ನೀಡಬೇಕೆ? ಖಂಡಿತ ವಿಠಲನು ನಮ್ಮನ್ನು ಆ ಪರಿಸ್ಥಿತಿಗೆ ತಂದಿಲ್ಲ.
6
ಇಲ್ಲೇಕೆ ಅಷ್ಟೊಂದು ವಸ್ತುಗಳಿವೆ? ಏನಾದರೂ ಸಮಾರಂಭ ನಡೆಯುವುದೆ?
ಹೌದು ಸ್ವಾಮಿ, ನಾಳೆ ನನ್ನ ಮಗಳ ಮದುವೆ ನಡೆಯಲಿದೆ. ಮದುವೆ ಔತಣಕ್ಕಾಗಿ ನಾವು ತಯಾರಿ ನಡೆಸಬೇಕಾಗಿದೆ. ಅಷ್ಟೊಂದು ಮಂದಿ ಅತಿಥಿಗಳಿಗೆ ಅಡುಗೆ ಮಾಡುವುದು ಹೇಗೆಂದು ನಮಗೆ ಚಿಂತೆಯಾಗಿದೆ.
ನೀವೇನೂ ಚಿಂತಿಸಬೇಡಿ. ನನಗೆ ಅಡುಗೆ ಮಾಡಿ ತುಂಬ ಅನುಭವವಿದೆ. ನನಗೆ ಏನೇನು ಸಾಧ್ಯವೋ ಎಲ್ಲ ಸಹಾಯವನ್ನೂ ಮಾಡುತ್ತೇನೆ.
ಸ್ವಾಮಿ ನಿಮ್ಮನ್ನು ವಿಠಲ ದೇವರೇ ಕಳುಹಿಸಿರಬೇಕು ಎಂದು ನನಗನ್ನಿಸುತ್ತದೆ.
7
ಮರುದಿನ ವರನ ಕಡೆಯವರು ಬಹಳ ಸಂಭ್ರಮದಿಂದ ಆಗಮಿಸಿದರು. ಇದ್ದಕ್ಕಿದ್ದಂತೆ ಮದುವೆ ಊಟಕ್ಕೆ ಬೇಕಾದ ವಸ್ತುಗಳು ಭಾರೀ ಪ್ರಮಾಣದಲ್ಲಿ ಬಂದವು.
ಸ್ವಾಮಿ, ಈ ವಸ್ತುಗಳೆಲ್ಲ ಇದ್ದಕ್ಕಿದ್ದಂತೆ ಬಂದವು. ಅತಿಥಿಗಳೂ ಬಂದರು. ಇವನ್ನೆಲ್ಲ ಹೇಗೆ ತಯಾರು ಮಾಡೋಣ? ವಿಠಲಾ!
ನಿಳೋಬ, ನೀವು ಅತಿಥಿಗಳನ್ನು ಚೆನ್ನಾಗಿ ನೋಡಿಕೊಳ್ಳಿ. ಇಲ್ಲಿನದನ್ನೆಲ್ಲ ನಾನು ನಿಭಾಯಿಸುತ್ತೇನೆ. ನೀವೇನೂ ಚಿಂತಿಸಬೇಡಿ.
ಅವರಿಗೆ ಬೇರೆ ಯಾವ ಸಹಾಯವೂ ಬೇಡವೆಂದು ಆ ಹಿರಿಯರು ಹೇಳುತ್ತಾರೆ. ಅವರೊಬ್ಬರೇ ಹೇಗೆ ನಿಭಾಯಿಸುತ್ತಾರೋ!
8
ಮದುವೆ ಸಮಾರಂಭ ಮುಗಿದು, ಊಟದ ವೇಳೆ ಸಮೀಪಿಸಿತು.
ಅಹ ! ಎಂಥ ರುಚಿಕರವಾದ ಊಟ! ಏನು ಪರಿಮಳ!
ಓ! ಪಾಯಸ ಎಷ್ಟೊಂದು ರುಚಿಯಾಗಿದೆ! ಅದ್ಭುತ!
9
ಆಹಾಹಾ! ಎಲ್ಲರೂ ಎಷ್ಟೊಂದು ಸಂತೋಷದಿಂದ ಊಟ ಮಾಡುತ್ತಿದ್ದಾರೆ!
ಇದೇನು ಆಶ್ಚರ್ಯ! ಆ ಹಿರಿಯ ವ್ಯಕ್ತಿ ಎಡೆಬಿಡದೆ ಕೆಲಸ ಮಾಡುತ್ತಿದ್ದಾನೆ. ಪಂಢರೀನಾಥ ಸ್ವಾಮಿಯೇ ಅವನನ್ನು ಸರಿಯಾದ ವೇಳೆಗೆ ಕಳುಹಿಸಿರಬೇಕು. ವಿಠಲಾ! ನಿನ್ನ ದಯೆಗೆ ಎಣೆಯೇ ಇಲ್ಲ!



10
ಒಳ್ಳೆಯದು ... ಎಂಥ ಭೋಜನ! ಇಂಥ ಅದ್ಭುತವಾದ ಊಟವನ್ನು ನಾವು ಇದುವರೆಗೆ ಮಾಡಿಲ್ಲ. ಅಡುಗೆ ಯಾರದು?
ಮೊದಲು ತಾಂಬೂಲ ಸ್ವೀಕರಿಸಿ, ಸ್ವಾಮಿ. ನಾನೇ ಅಡುಗೆ ಮಾಡಿದೆ.
11
ನಿಳೋಬ ಅವರೆ, ನಮ್ಮ ಮಗನಿಗೆ ಭಜನೆ ಮಾಡುವವರ ಮಗಳನ್ನು ಸೊಸೆಯಾಗಿ ತಂದುಕೊಳ್ಳುತ್ತಿದ್ದೇನೆ ಎಂದು ಬಹಳ ಮಂದಿ ನಮ್ಮನ್ನು ಹಾಸ್ಯ ಮಾಡಿದರು. ನೀವು ಇಷ್ಟು ವಿಜೃಂಭಣೆಯಿಂದ ಮದುವೆ ಮಾಡಿಸಿ, ಅವರೆಲ್ಲ ಬಾಯಿ ಮುಚ್ಚಿಸಿ ಬಿಟ್ಟಿರಿ.
ಎಲ್ಲವೂ ವಿಠಲನ ಕೃಪೆಯಿಂದಲೇ ನಡೆಯಿತು.
12
ಸ್ವಾಮಿ, ನೀವು ನಮಗೆ ಮಾಡಿದ ಉಪಕಾರವನ್ನು ನಾವು ಹೇಗೆ ಹಿಂದಿರುಗಿಸೋಣ? ದಯವಿಟ್ಟು ನಮ್ಮ ಈ ಸಣ್ಣ ಕಾಣಿಕೆಯನ್ನು ಸ್ವೀಕರಿಸಿ.
ಸ್ವಲ್ಪ ತಡೆಯಿರಿ. ನಾನೇ ದೇವರ ಕೋಣೆಗೆ ಹೋಗಿ ಬರುತ್ತೇನೆ.
13
ಆ ಹಿರಿಯರು ದೇವರ ಕೋಣೆಯಿಂದ ಹಿಂದಿರುಗಿ ಬರಲೇ ಇಲ್ಲವಲ್ಲ?
ಆಹ! ದೇವರ ಕೋಣೆಯಲ್ಲಿ ಯಾರೂ ಇಲ್ಲವಲ್ಲ! ಇದೂ ವಿಠಲನ ಲೀಲೆಯೇ ಹಾಗಾದರೆ?
ರಾಮಕೃಷ್ಣ ಹರಿ! ರಾಮಕೃಷ್ಣ ಹರಿ!
ವಿಠಲನ ದಯೆಯನ್ನು ನೆನೆದು ನಿಳೋಬ 'ರಾಮಕೃಷ್ಣ ಹರಿ' ಎಂದು ಹಾಡತೊಡಗಿದ.

**14**


ಇನ್ನೊಂದು ದಿನ ನಿಳೋಬನಿಗೆ ಕನಸಿನಲ್ಲಿ ತುಕಾರಾಮ ಕಾಣಿಸಿಕೊಂಡ. ತನ್ನನ್ನು ಭೇಟಿಯಾಗುವಂತೆ ಅವನು ನಿಳೋಬನಿಗೆ ಹೇಳಿದ. ಕೂಡಲೇ ನಿಳೋಬನು ದೇಹುಗೆ ಹೋದನು. ಆದರೆ ಕೆಲವೇ ದಿನಗಳ ಮುನ್ನ ತುಕಾರಾಮ ಭಗವಂತನ ಪಾದ ಸೇರಿದ್ದ. ತುಕಾರಾಮನನ್ನು ಕಾಣದೆ ಹಿಂದಿರುಗಲಾರೆ ಎಂದು ನಿಳೋಬನು ಧ್ಯಾನಕ್ಕೆ ಕುಳಿತ.

**15**

ಅವನ ಮುಂದೆ ಪಾಂಡುರಂಗ ವಿಠಲನೇ ಕಾಣಿಸಿಕೊಂಡ.




**16**




''ಆತನ ಸಾಕ್ಷಾತ್ಕಾರಕ್ಕೆ ಆತನಲ್ಲಿ ವಿಶ್ವಾಸವಿರುವುದು ಮತ್ತು ಆತನಿಗೆ ಶರಣಾಗತನಾಗುವುದು ಇವೆರಡೂ ಆವಶ್ಯಕ. ಸ್ವಾಭಾವಿಕವಾಗಿ ಮನುಷ್ಯ ಅಜ್ಞಾನಿ. ತಪ್ಪುವುದು ಸ್ವಾಭಾವಿಕ. ಒಂದು ಸೇರಿನ ಗಡಿಗೆಯಲ್ಲಿ ನಾಲ್ಕು ಸೇರು ಹಾಲು ಹಿಡಿಯಬಲ್ಲುದೆ? ಆದರೆ ಯಾವ ಮಾರ್ಗ ಅನುಸರಿಸಿದರೂ ಸರಿಯೆ. ವ್ಯಾಕುಲ ಚಿತ್ತದಿಂದ ಆತನನ್ನು ಕರೆಯಬೇಕು. ಆತ ಅಂತರ್ಯಾಮಿ. ಹೃತ್ಪೂರ್ವಕವಾದ ಕರೆಗೆ ಆತ ಕಿವಿಗೊಟ್ಟೇಗೊಡುತ್ತಾನೆ. ವ್ಯಾಕುಲನಾಗಿ ಸಾಕಾರವಾದಿಗಳ ಮಾರ್ಗದಲ್ಲಾದರೂ ಹೋಗು, ನಿರಾಕಾರವಾದಿಗಳ ಮಾರ್ಗದಲ್ಲಾದರೂ ಹೋಗು, ಆತನೇ ದೊರೆಯುತ್ತಾನೆ.''

— ಶ್ರೀರಾಮಕೃಷ್ಣರು

